ಯುದ್ಧ ಹಾಗೂ ಅಪರೇಶನ್ ಪವನ ಮತ್ತು ಮೇಘದೂತ್‌ದಲ್ಲಿ ಮಡಿದ ಹಾಗೂ ಗಾಯಗೊಂಡ ಯೋಧರ ವಿಧವೆಯರು : ಅವಲಂಬಿತರಿಗೆ ನೀಡುತ್ತಿರುವ ಸೌಲಭ್ಯಗಳು:

25. ಅನುಗ್ರಹ ಪೂರ್ವಕ ಅನುದಾನ:
ಯುದ್ಧ ವಿಧವೆ ರೂ. 2 ಲಕ್ಷ ಮತ್ತು ಗಾಯಗೊಂಡ : ನಾಪತ್ತೆಯಾದ ರೂ. 50,000.
26. ಪ್ರತಿಯೊಂದು ಹೆಣ್ಣು ಮಕ್ಕಳ ಮದುವೆಗೆ ರೂ. 8000 ಗಳ ಅನುದಾನ.
27. 01–11–1978 ಕ್ಕಿಂತ ಮೊದಲಿನ ಯುದ್ಧ ವಿಧವೆಯರಿಗೆ ರೂ. 500 ಗೌರವಧನ.
28. ಯುದ್ಧ ವಿಧವೆ : ಅವಲಂಬಿತರಿಗೆ ಎರಡು ಎಕರೆ ನೀರಾವರಿ ಅಥವಾ ನಾಲ್ಕು ಎಕರೆ ಮಳೆ ಆಧರಿತ ಅಥವಾ ಎಂಟು ಎಕರೆ ಒಣ ಜಮೀನು ಅಥವಾ ರೂ. 25,000 ಜಮೀನಿಗೆ ಬದಲಾಗಿ ನಗದು ಅನುದಾನ.
29. ಅಧಿಕಾರಿಗಳಿಗೆ 60X10 ಮತ್ತು ಉಳಿದವರಿಗೆ 30X40 ಅಳತೆಯ ನಿವೇಶನದಲ್ಲಿ ಮನೆ.
30. ರೂ. 20,000 ಮನೆ ರಿಪೇರಿ ಅನುದಾನ.
31. ಮಾಜಿ ಸೈನಿಕರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಎರಡು ಜನ ಯುದ್ಧ ಸಂತ್ರಸ್ಥ ಸದಸ್ಯರ ವರೆಗೆ ಉದ್ಯೋಗಾವಕಾಶ.
32. 1984ರ ನಂತರದ ಯುದ್ಧ ಮಾಡಿದ ಯೋಧರ ಮಕ್ಕಳಿಗೆ ಪೂರ್ಣ ಟ್ಯೂಷನ್ ಫೀ, ಹಾಸ್ಟಲ್ ಖರ್ಚು, ಸಮವಸ್ತ್ರ, ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ಖರ್ಚು ಭರಿಸಲಾಗುತ್ತಿದೆ.

ಆಪರೇಶನ ವಿಜಯ್ (ಕಾರ್ಗಿಲ್ ಯುದ್ಧ)

33. ಅನುಗ್ರಹ ಪೂರ್ವಕ ಅನುದಾನ ರೂ. 2.00 ಲಕ್ಷ
34. ಪುಕ್ಕಟೆ ಮನೆ.
35. ರೂ. 25,000 ಜಮೀನು ಬದಲಾಗಿ ನಗದು ಅನುದಾನ ದಿನಾಂಕ: 21–11–2004 ರಿಂದ ರೂ. 1,00,000.
36. ಮಕ್ಕಳಿಗೆ ಶಿಕ್ಷಣ ರಿಯಾಯಿತಿ
37. ಉದ್ಯೋಗದಲ್ಲಿ ಆದ್ಯತೆ.

228 (20) : ಶ್ರೀ ಬೋಪಯ್ಯ, ಕೆ.ಜಿ. (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಡಿಕೇರಿ ನಗರಸಭೆಯಲ್ಲಿರುವ ಇಂಜಿನಿಯರ್ ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು?

ಆ) ಖಾಲಿ ಇರುವ ಸಿಬ್ಬಂದಿಗಳೆಷ್ಟು?

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಒಟ್ಟು ಹುದ್ದೆ –5
ಖಾಲಿ ಇರುವ ಹುದ್ದೆಗಳು –4

ಆ) 1) ಲೆಕ್ಕ ಅಧೀಕ್ಷಕರು 1
2) ಕಛೇರಿ ವ್ಯವಸ್ಥಾಪಕರು 1
3) ಅಕೌಂಟೆಂಟ್ 1
4) ಹಿರಿಯ ಆರೋಗ್ಯ ನಿರೀಕ್ಷಕ 3
5) ಪ್ರಥಮ ದರ್ಜೆ ಸಹಾಯಕ 2
6) ಶೀಘ್ರಲಿಪಿಗಾರರು 2
7) ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು 2
8) ಕಿರಿಯ ಆರೋಗ್ಯ ನಿರೀಕ್ಷಕ 3

ಇ) ಅಭಿಯಂತರರುಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರಬರೆದು ಕ್ರಮವಹಿಸಲಾಗಿದೆ ಹಾಗೂ ಇತರೆ ಹುದ್ದೆಗಳನ್ನು ವರ್ಗಾವಣೆ ಮುಖಾಂತರ ಭರ್ತಿ ಮಾಡಲಾಗುತ್ತಿದೆ.

229 (22) : ಶ್ರೀ ಬೋಪಯ್ಯ, ಕೆ.ಜಿ. (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಡಿಕೇರಿ ನಗರದ ಕುಡಿಯುವ ನೀರಿನ ಸಮಸ್ಯೆಗೆ ಕಾವೇರಿ ನದಿಯ ಬೇತ್ರಿಯಿಂದ ನೀರು ಸರಬರಾಜು ಮಾಡಲು ಕೈಗೊಂಡ ಯೋಜನೆ ಯಾವ ಹಂತದಲ್ಲಿದೆ;

ಆ) ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಮಡಿಕೇರಿ ನಗರಕ್ಕೆ ಕಾವೇರಿ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ. 15.00 ಕೋಟಿಗಳಿಗೆ ತಯಾರಿಸಿದ್ದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಯೋಜನೆಗಾಗಿ ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸಿದ ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

230 (882) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಇವುಗಳಲ್ಲಿ, ಕಲಘಟಗಿ ವಿಧಾನಸಭಾ ಕ್ಷೇತ್ರದ ಐದಾರು ಕಾಮಗಾರಿಗಳು ಹಣ ಬಿಡುಗಡೆಯಾಗದೇ ಸ್ಥಗಿತಗೊಂಡಿರುವ ಪ್ರಕರಣಗಳು ಜರುಗಿವೆಯೇ;

ಇ) ಇದಕ್ಕೆ ಕಾರಣಗಳೇನು;

ಈ) ಸದರಿ ಕಾಮಗಾರಿಗಳಿಗಾಗಿ ಈಗಾಗಲೇ ಬಿಡುಗಡೆಯಾದ ಮೊತ್ತವೆಷ್ಟು ಮತ್ತು ನಿಗದಿಪಡಿಸಿದ ಹಣವೆಷ್ಟು;